ಕೆಣಕುವಂಗ ಅವರ ಉತ್ತರಕ್ಕೆ ಕಾಯ್ದು ನಿಂತಳು. ರಾಧಾಬಾಯಿ, ''ಇದೇನು ಹೊಸಾದಲ್ಲ. ಹಿಂಗೆ ಅನಕೋತ ವರುಷಗಳೆ ಹೋಗ್ಯಾವ. ನಾ ನಿಮಗ ಬಿಡಂಗಿಲ್ಲ. ನೀವು ನನಗ ಬಿಡಂಗಿಲ್ಲ. ಸುಮ್ಮ ನಾಳೆ ಬರ್ರಿ...'' ಎಂದು ನಕ್ಕು ಕಳಿಸಿದರು.

ಸುನಂದಾಬಾಯಿ ಅವ್ವ ಕಮಲಾಬಾಯಿಯಿಂದಲೇ ಇವರ ಮನಿ ಭಕ್ರಿ ಬೇಯುತಿದ್ದವು. ಆಕೆ ಬಹಳ ಸಂಭಾವಿತಳು. ಭಕ್ರಿ ಮಾಡಿದ ನಂತರ ಇವರ ಕೈಯಾಗಿನ ಕೆಲಸ ಕಸಿದುಕೊಂಡು ಮಾಡಿಡುತಿದ್ದಳು. ಪಲ್ಯಾ ಆರಿಸಿಡೋದು, ದೇವರ ಉಪಗರಣಿ ತೊಳಿಯೋದು, ಹಿಟ್ಟು ಜರಡಿಯಾಡಿಸೋದು ಹಿಂಗ ಹೆಚ್ಚಿನ ಕೆಲಸದ ಪಗಾರದ ಆಶಾ ಇಲ್ಲದೆ ಮಾಡಿಕೊಡುತಿದ್ದಳು. ''ಎರಡು ಕೆಲಸ ಹೆಚ್ಚಿಗಿ ಮಾಡಿದ್ರ ಕೈ ಬಿದ್ದು ಹೋಗ್ತಾವೇನು'' ಎನ್ನುತ್ತಿದ್ದಳು. ಆದರೆ, ಸುನಂದಾಬಾಯಿ ಹಂಗಲ್ಲ... ಪ್ರತಿ ಕೆಲಸವನ್ನು ದುಡ್ಡಿನಿಂದಲೇ ಅಳೆಯುತಿದ್ದಳು. ''ನಾವು ಬಡದಾಡೋದೆ ರೊಕ್ಕದ ಸಲವಾಗಿಯಲ್ಲೇನ್ರಿ?'' ಎಂದು ಆರ್ಥಿಕ ನೀತಿಯನ್ನು ಮುಂದುಮಾಡುತಿದ್ದಳು. ಯಾರಾದರೂ ಅವರವ್ವನ ಸ್ವಭಾವ ವರ್ಣಿಸಿದ್ರೆ, ''ಆ ಕಾಲ ಹೋಯ್ತುರ್ರಿ... ಎಲ್ಲಾದಕ್ಕೂ ರೊಕ್ಕನೇ ಮೊದಲ ಈಗ... ನಮ್ಮವ್ವಗ ಬುದ್ಧಿ ಇರಲಿಲ್ಲ. ಎಲ್ಲಾರ ಮನ್ಯಾಗ ಪುಕ್ಕಟ ಕೆಲಸಾ ಮಾಡಿ ನನಗ, ನನ್ನ ತಮ್ಮಗ ಹೊಟ್ಟೆಯೊಂದೇ ತುಂಬಿಸಿದಳು. ಓದಸಲಿಲ್ಲ... ಬರಸಲಿಲ್ಲ. ಬಾತಿಗಿ ಬಾರಲಾದವನ ಜೋಡಿ ನನ್ನ ಲಗ್ನಾ ಮಾಡಿ ನನ್ನ ಬದಕೂ ಒಲ್ಯಾಗ ಬೇಯೂಹಂಗ ಮಾಡಿದಳು'' ಎಂದು ಅಲವತ್ತುಕೊಳ್ಳುತ್ತಿದ್ದಳು.

ಪಾಪ ಕಮಲಾಬಾಯಿಯಾದರೂ ಏನ್ ಮಾಡತಾಳ? ಸಣ್ಣತನದೊಳಗೆ ಗಂಡನನ್ನು ಕಳೆದುಕೊಂಡಳು. ಅತ್ತಿಮನೆದಾಗಲಿ ತವರಮನಿದಾಗಲಿ ಆಸರೆ ಇಲ್ಲದ್ದಕ್ಕೆ ಅಡಿಗೆ ಕೆಲಸವನ್ನೇ ನೆಚ್ಚಿಕೊಂಡಿದ್ದಳು. ಮದುವೆಯಾದ ವರುಷದೊಳಗೇ ಅವಳಿಜವಳಿ ಮಕ್ಕಳಾಗಿ ಮರು ವರ್ಷದಲ್ಲೇ ಗಂಡ ಆ್ಯಕ್ಸಿಡೆಂಟ್ ಆಗಿ ಅಕಸ್ಮಾತ್ತಾಗಿ ತೀರಿಹೋದ. ಯಾವುದಕ್ಕೂ ಸಹಾಯವಿಲ್ಲದ ಅತ್ತೆಯ ಮನೆಯವರು ಈಗ ಮಾತ್ರ ಆಕೆ ಮಡಿಯಾಗಬೇಕೆಂದು ಒತ್ತಾಯಿಸಿ ಅವಳ ಸೊಂಪಾದ ರೇಶಿಮೆಯಂತಹ ಕೂದಲನ್ನು ತೆಗೆಸಿದ್ದು ಆಕೆಯನ್ನು ಆಘಾತಕ್ಕೀಡುಮಾಡಿತ್ತು. ಗೋಡೆಯಲ್ಲಿ ಮೆತ್ತಿದ್ದ ಅಂಗೈಯಗಲದ ಕನ್ನಡಿಯಲ್ಲಿ ತನ್ನ ಬೋಳು ತಲೆ ನೋಡಿ ಹೌಹಾರಿ ಅವಳು ಸುರಿಸಿದ ಕಣ್ಣೀರಿಗೆ ಲೆಕ್ಕವಿಲ್ಲ. ಗಂಡ ಹೋದುದಕ್ಕೆ ಅವಳು ಅಳುತಿದ್ದಳೊ ಅಥವಾ ಕೂದಲು ಹೋದುದಕ್ಕೆ ಅಳುತಿದ್ದಳೋ ಅವಳಿಗೂ ಅರ್ಥವಾಗಿರಲಿಲ್ಲ. ಅವಳ ಮನಸ್ಸಿನ ಮೇಲಾದ ಪರಿಣಾಮದಿಂದ ತನಗೆ ತಾನೆ ಮಾತಾಡಿಕೊಳ್ಳುವುದು ಪ್ರಾರಂಭವಾಯಿತು. ಮಾತುಗಳೆಲ್ಲ ಕೂದಲು ಕುರಿತೇ ಆಗಿತ್ತು. ಬೋಳು ತಲೆಯನ್ನೆ ಬಾಚಣಿಕೆಯಿಂದ ಬಾಚಿಕೊಂಡು ಹೆರಳು ಹಾಕಿಕೊಂಡಂತೆ ಅಥವಾ ಬುಚಡಾ ಕಟ್ಟಿದಂತೆ ಮಾಡುತಿದ್ದಳು. ಜಡೆ ಹಾಕಿದ ಪುಟ್ಟ ಹೆಣ್ಣು ಮಕ್ಕಳು ಎದುರು ಬಂದ್ರೆ ಅವರ ಜಡೆ ಎಳೆದು ನನ್ನ ಕೂದಲ್ಯಾಕ ನೀ ಸಿಗಸಿಕೊಂಡಿದ್ದಿ ತಾ... ನಂದದು... ಎಂದು ಎಳೆದಾಡುತಿದ್ದಳು.

ಅವಳನ್ನು ಹಟದಿಂದ ಮಡಿಮಾಡಿದವರು ಈಗ ಎಲ್ಲಿರುವರೊ. ಆದರೆ, ಹಳಿ ತಪ್ಪಿದ ಅವಳ ಬದುಕನ್ನು ಸರಿಪಡಿಸಲು ಯಾರೊಬ್ಬರೂ ಮುಂದಾಗಲಿಲ್ಲ. ಇಂಥವರನ್ನೂ ಬದುಕಿಸುವ ಹೊಣೆ ಆ ಭಗವಂತನಿಗೆ ಇರುತ್ತದೆಯಲ್ಲವೆ? ರಾಧಾಬಾಯಿಯ ಮಾವ ಪಿ.ಕೆ. ದೇಸಾಯಿಯವರು ಊರಿನ ಪ್ರಮುಖ ವಕೀಲರು. ಪ್ರಗತಿಪರ ವಿಚಾರದವರು. ತಮ್ಮ ಸಮಾಜದ ಒಬ್ಬ ಹೆಂಗಸಿನ ಬಗ್ಗೆ ಅವರ ಮನಸ್ಸು ಮಿಡಿದು ತಮ್ಮ ಮನೆಯ ಅಡುಗೆ ಕೆಲಸಕ್ಕೆ ನೇಮಿಸಿದ್ದಲ್ಲದೆ ಹೆಂಡತಿಗೆ ತಿಳಿಹೇಳಿ ಅವಳಿಂದಲೇ ಕಮಲಾಬಾಯಿಗೆ ತಲೆಗೂದಲು ಬೆಳೆಯಲು ಬಿಡಲು ಹೇಳಿದರು.

ಮೊದಲಿನಂತೆ ಉದ್ದಕೂದಲೇನೊ ಬೆಳೆಯಿತು. ಆದರೆ, ಆಕೆಗೆ ಅದರ ಕಡೆ ಗಮನವಿರಲಿಲ್ಲ. ಅವಳ ಮನದ ನೋವು ಕಡಿಮೆಯಾಗದಿದ್ದರೂ ಒಂದು ನಮೂನೆ ಮಂಕು ಆವರಿಸಿದ್ದು ಸುಮ್ಮನೆ ಹೇಳಿದ ಕೆಲಸ ಮಾಡುತಿದ್ದಳು. ಮನೆಯ ಮಕ್ಕಳನ್ನು ಹೊಟ್ಟೆಗಿತ್ತು ಪೋಷಿಸಬೇಕೆಂಬ ತಿಳಿವಳಿಕೆಯೂ